<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **591 (622)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ. ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **22.07.2024** |
| **ಉತ್ತರಿಸುವ ಸಚಿವರು** | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

*****

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| **ಅ** | ರಾಜ್ಯದಲ್ಲಿ ಮಳೆಗಾಲದ ಸಮಯದಲ್ಲಿ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; ಉಚಿತ ಚಿಕಿತ್ಸೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಸದರಿ ಬಿಲ್ಲಿನ ಮೊತ್ತವನ್ನು ಸರ್ಕಾರದಿಂದ ಪಾವತಿಸಲು ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಮಳೆಗಾಲದ ಸಮಯದಲ್ಲಿ ಸೊಳ್ಳೆಗಳಿಂದ ಹರಡುವ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಚಿಕುನ್‌ಗುನ್ಯಾ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಡೆಂಗ್ಯೂಜ್ವರ ಪ್ರಕರಣಗಳ ಪರೀಕ್ಷೆ, ಚಿಕಿತ್ಸೆ ಹಾಗೂ ನಿರ್ವಹಣೆಯ ಸೌಲಭ್ಯಗಳನ್ನು (ICU ಸೇರಿದಂತೆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಂಪೂರ್ಣ ಉಚಿತವಾಗಿ ಒದಗಿಸಲಾಗುತ್ತಿದೆ. (BPL & APL ವರ್ಗದವರಿಗೆ).<br><br>ಕರ್ನಾಟಕ ಸರ್ಕಾರವು ರಾಜ್ಯದ ಜನತೆಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆ ಒದಗಿಸುವ ಉದ್ದೇಶದಿಂದ ಯುನಿವರ್ಸಲ್ ಹೆಲ್ತ್ ಸ್ಕೀಮ್ ಆದ "ಆಯುಷ್ಮಾನ್ ಭಾರತ – ಆರೋಗ್ಯ ಕರ್ನಾಟಕ" ಯೋಜನೆಯನ್ನು ಜಾರಿಗೊಳಿಸಿರುತ್ತದೆ.<br><br>ಬಿಪಿಎಲ್ ಪಡಿತರ ಕಾರ್ಡ್ ಹೊಂದಿರುವ ಕುಟುಂಬಕ್ಕೆ ಒಂದು ವರ್ಷಕ್ಕೆ ರೂ.5 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಲಭ್ಯ, ಎಪಿಎಲ್ ಕಾರ್ಡ್ ದಾರರು ಅಥವಾ ಬಿಪಿಎಲ್ ಕಾರ್ಡ್ ಹೊಂದಿಲ್ಲದವರಿಗೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಚಿಕಿತ್ಸಾ ವೆಚ್ಚವನ್ನು ಸರ್ಕಾರದ ವತಿಯಿಂದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಭರಿಸುತ್ತದೆ. ಉಳಿದ 70% ರಷ್ಟು ಚಿಕಿತ್ಸಾ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕಾಗಿರುತ್ತದೆ. ವಾರ್ಷಿಕ ಮಿತಿ ಪ್ರತಿ ಎಪಿಎಲ್ ಕುಟುಂಬಕ್ಕೆ ರೂ.1.50 ಲಕ್ಷವಿರುತ್ತದೆ. ಈ ಯೋಜನೆಯಡಿಯಲ್ಲಿ ಯಾವುದೇ ವಯಸ್ಸಿನ ಮಿತಿ ಇರುವುದಿಲ್ಲ. |

<table>
<tr>
<td>ಆ</td>
<td>ಡೆಂಗ್ಯೂ ಜ್ವರದಿಂದ ಭಾದಿತರಾದವರ ಸಂಖ್ಯೆ ಎಷ್ಟು; ಮರಣ ಹೊಂದಿದವರ ಸಂಖ್ಯೆ ಎಷ್ಟು; ಮರಣ ಹೊಂದಿದವರಿಗೆ ಸರ್ಕಾರದಿಂದ ಪರಿಹಾರ ನೀಡಲಾಗುವುದೇ; (ಜಿಲ್ಲಾವಾರು ವಿವರ ನೀಡುವುದು)</td>
<td>ರಾಜ್ಯದಲ್ಲಿ ಈ ವರ್ಷ ದಿನಾಂಕ:1.1.2024ರಿಂದ ದಿನಾಂಕ: 17.07.2024ರವರೆಗೆ ಒಟ್ಟು 10973 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ – 2ರಲ್ಲಿ ನೀಡಲಾಗಿದೆ.<br><br>ರಾಜ್ಯದಲ್ಲಿ 17.07.2024ರ ವರೆಗೆ ಒಟ್ಟು 08 ದೃಢಪಟ್ಟ ಡೆಂಗ್ಯೂಯಿಂದ ಮರಣ ಸಂಭವಿಸಿರುತ್ತದೆ.<br><br>
<table>
<tr><th>Sl No</th><th>Districts</th><th>No of Deaths</th></tr>
<tr><td>1</td><td>Hassan</td><td>2</td></tr>
<tr><td>2</td><td>Shivamoga</td><td>2</td></tr>
<tr><td>3</td><td>Haveri</td><td>1</td></tr>
<tr><td>4</td><td>Dharwad</td><td>1</td></tr>
<tr><td>5</td><td>Mysuru</td><td>1</td></tr>
<tr><td>6</td><td>BBMP</td><td>1</td></tr>
<tr><td></td><td>Total</td><td>8</td></tr>
</table>
<br>ಡೆಂಗ್ಯೂಯಿಂದ ಮರಣ ಹೊಂದಿದವರಿಗೆ ಸರ್ಕಾರದಿಂದ ಯಾವುದೇ ಪರಿಹಾರ ನೀಡುತ್ತಿಲ್ಲ.</td>
</tr>
<tr>
<td>ಇ</td>
<td>ರಾಜ್ಯದಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿ ಘೋಷಣೆ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು)</td>
<td>ತಜ್ಞರ ಸಲಹಾ ಸಮಿತಿಯ ಅಭಿಪ್ರಾಯದಂತೆ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರದ ವತಿಯಿಂದ ತೆಗೆದುಕೊಂಡಿರುವ ಕ್ರಮಗಳು ಸರಿಯಾದ ನಿಟ್ಟಿನಲ್ಲಿ ಹಾಗೂ ಅಗತ್ಯಕ್ಕೆ ತಕ್ಕಂತೆ ಸಾಕಾಗಿರುತ್ತದೆ. ಅಲ್ಲದೇ ಈ ಸಮಯದಲ್ಲಿ ಯಾವುದೇ ರೀತಿಯ ಮೆಡಿಕಲ್ ಎಮರ್ಜೆನ್ಸಿ ಘೋಷಿಸುವ ಅಗತ್ಯತೆ ಇರುವುದಿಲ್ಲ. ಏಕೆಂದರೆ ಆಸ್ಪತ್ರೆಗಳಿಗೆ ಒಳರೋಗಿಗಳ ಸಂಖ್ಯೆ ಸೀಮಿತವಾಗಿರುವುದರಿಂದ ಆಸ್ಪತ್ರೆಗಳ ಮೂಲಭೂತ ಸೌಕರ್ಯ ಅವರುಗಳಿಗೆ ಚಿಕಿತ್ಸೆ ನೀಡಲು ಸಾಕಾಗಿರುತ್ತದೆ. ಈ ಸಂದರ್ಭದಲ್ಲಿ ಜನಸಾಮಾನ್ಯರಲ್ಲಿ ಈ ರೋಗದ ಮುಂಜಾಗ್ರತೆ ಕ್ರಮ ಕುರಿತು ಹಾಗೂ ರೋಗ ಎಚ್ಚರಿಕೆಯ ಲಕ್ಷಣಗಳ ಕುರಿತು ಅರಿವು ಮೂಡಿಸುವುದಾಗಿದೆ. ಅದರ ಬದಲಾಗಿ ಈ ಸಮಯದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಲ್ಲಿ ಒಂದು ಕಡೆ ಇದರಿಂದ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ ಮತ್ತು ಇನ್ನೊಂದು ಕಡೆ ಇದರಿಂದ ಜನಸಾಮಾನ್ಯರಲ್ಲಿ ಅನಗತ್ಯ ಭಯವುಂಟು ಮಾಡಿಸಿದಂತಾಗುತ್ತದೆ.</td>
</tr>
</table>

**ಆಕುಕ 89 ಎಸ್‌ಎಂಎಂ 2024**

**(ದಿನೇಶ್ ಗುಂಡೂರಾವ್)**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

ಅನುಬಂಧ -1

ಮಲೇರಿಯಾ, ಡೆಂಗಿ ಮತ್ತು ಚಿಕುಂಗುನ್ಯಾ ನಿಯಂತ್ರಣಕ್ಕಾಗಿ ರಾಜ್ಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ:-

ಮೇಲೇರಿಯಾ ನಿಯಂತ್ರಣದಲ್ಲಿ ಅನಾಫಿಲೀಸ್ ಸೊಳ್ಳೆಯ ನಿರ್ಮೂಲನಾ ಚಟುವಟಿಕೆಯು ಪ್ರಧಾನವಾಗಿದ್ದು, ಎಲ್ಲಾ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಮಾರ್ಗಸೂಚಿಗಳಂತೆ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

1. ಆರೋಗ್ಯ ಕಾರ್ಯಕರ್ತರು ಮತ್ತು ಆಶಾ ಕಾರ್ಯಕರ್ತೆಯರು ಪ್ರತಿ ಮನೆಗಲ್ಲಿ ಜ್ವರ ಸಮೀಕ್ಷೆ ನಡೆಸಿ ಜ್ವರ ಇದ್ದವರಿಂದ ರಕ್ತ ಲೇಪನ ಸಂಗ್ರಹಿಸಿ ಪರೀಕ್ಷೆ ಮಾಡಿಸುತ್ತಿದ್ದಾರೆ. ಮಲೇರಿಯಾ ತ್ವರಿತ ಪತ್ತೆ ಕಿಟ್ಟುಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೂ ಸರಬರಾಜು ಮಾಡಿದ್ದು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಲಾಗುತ್ತಿದೆ.
2. ಮಲೇರಿಯಾ ಧೃಡಪಟ್ಟಲ್ಲಿ ಅಂತಹ ರೋಗಿಗಳಿಗೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಅವಶ್ಯವಿರುವ ಔಷಧಿಗಳನ್ನು ಲಭ್ಯವಿರಿಸಲಾಗಿದೆ.
3. ಸಮುದಾಯದಲ್ಲಿ ಮಲೇರಿಯಾ ನಿಯಂತ್ರಣದ ಬಗ್ಗೆ ಹಲವಾರು ಕಾಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಹಾಗೂ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.
4. ಪ್ರತಿ ಪಾಕ್ಷಿಕದಲ್ಲಿ ಮಲೇರಿಯಾ ಕಾರ್ಯಕ್ರಮದ ಪ್ರಗತಿ ಪರಿಶೀಲನೆಯನ್ನು ಇಲಾಖೆಯಿಂದ ನಡೆಸಲಾಗುತ್ತಿದೆ.ಕಾಲ ಕಾಲಕ್ಕೆ ಸರ್ಕಾರದಿಂದ ನೀಡುವ ಮಾರ್ಗಸೂಚಿಗನ್ವಯ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡು ಕಾರ್ಯರೂಪಕ್ಕೆ ತರಲಾಗುತ್ತಿದೆ. ಕಳೆದ ಮೂರು ವರ್ಷಕ್ಕೆ ಹೊಲಿಸಿದ್ದಲ್ಲಿ ಮಲೇರಿಯಾ ರೋಗಿಗಳ ಸಂಖ್ಯೆಯು ಗಣನೀಯವಾಗಿ ಇಳಿಕೆಯಾಗಿದ್ದು ಮಲೇರಿಯಾ ನಿರ್ಮೂಲನಾ ಹಂತದ ಕಡೆಗೆ ಸಾಗಲಾಗುತ್ತಿದೆ.
5. ಡೆಂಗಿ ಜ್ವರವನ್ನು ಕರ್ನಾಟಕ ಸಾರ್ವಜನಿಕ ಆರೋಗ್ಯ ನಿಯಮಗಳ ಅಡಿಯಲ್ಲಿ ಅಧಿಸೂಚಿತ ರೋಗವೆಂದು ಪ್ರಕಟಿಸಲಾಗಿದ್ದು, (Dengue including DHF & DSS, is under notifiable disease act under the Karnataka public health act vide Govt. Notification No:HFW/30SMM/98.Dt:13.03.1998) ಈ ಜ್ವರದ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಖಾಸಗಿ ಆರೋಗ್ಯ ಸಂಸ್ಥೆಗಳೂ ಸಹ ಡೆಂಗಿ ಪ್ರಕರಣಗಳ ಮಾಹಿತಿಯನ್ನು ಆರೋಗ್ಯ ಇಲಾಖೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
6. ಮುಂಗಾರು ಪೂರ್ವ, ಮುಂಗಾರು ಹಾಗೂ ಮುಂಗಾರಿನ ನಂತರದ ದಿನಗಳಲ್ಲಿ ಹಾಗು ಪ್ರವಾಹ ಹಾಗೂ ನಂತರದ ಸಮಯದಲ್ಲಿ ಡೆಂಗಿಜ್ವರ ಪ್ರಸರಣವು ಅಧಿಕವಾಗುವ ಹಿನ್ನೆಲೆಯಲ್ಲಿ ವರ್ಷದ ಆರಂಭದಲ್ಲಿಯೇ, ಬೆಂಗಳೂರು ನಗರ ಸೇರಿದಂತೆ, ಎಲ್ಲಾ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಿಗೆ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಕುರಿತು ಮಾರ್ಗಸೂಚಿಯನ್ನು ಮತ್ತು ಸುತ್ತೋಲೆಗಳನ್ನು ಕಳುಹಿಸಿದ್ದು ನಿಯಂತ್ರಣಕ್ಕೆ ಸನ್ನದ್ದ ಸ್ಥಿತಿಯಲ್ಲಿರಲು ಸೂಚಿಸಲಾಗಿದೆ.



Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 26/07/2024 11:02 AM

7. ಆಯುಕ್ತರು, ಆಕುಕ ಇಲಾಖೆರವರು, ವಿಶೇಷ ಆಯುಕ್ತರು, (ಆರೋಗ್ಯ ಮತ್ತು ಐ.ಟಿ) ಬಿಬಿಎಂಪಿ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪತ್ರವನ್ನು ಬರೆದು ತಮ್ಮ ವ್ಯಾಪ್ತಿಯಲ್ಲಿ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಗಳನ್ನು ನಡೆಸಿ ಡೆಂಗಿ ಕುರಿತು ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಯಂತೆ ಕ್ರಮವಹಿಸಲು ಮತ್ತು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.
8. ಆಯುಕ್ತರು, ಆಕುಕ ಇಲಾಖೆರವರು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಪತ್ರವನ್ನು ಬರೆದು ಪೌರಾಡಳಿತ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳು/ ನಗರ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಕಟ್ಟಡಗಳ ಕಾಮಗಾರಿ ಪ್ರದೇಶಗಳಲ್ಲಿ, ಹೋಟೆಲ್, ಅಂಗಡಿ-ಮುಂಗಟ್ಟುಗಳು, ವಾಣಿಜ್ಯ ಸಂಕೀರ್ಣಗಳ ಸುತ್ತ-ಮುತ್ತಲಿನ ಘನ ತ್ಯಾಜ್ಯಾಗಳಲ್ಲಿ ಮಳೆನೀರು ಸಂಗ್ರಹವಾಗಲಿದ್ದು ಅಲ್ಲಿ ಈಡೀಸ್ ಬೆಳವಣಿಗೆ ಹೆಚ್ಚಾಗುವುದರಿಂದ ಘನತ್ಯಾಜ್ಯಾಗಳನ್ನು ವಿಲೇವಾರಿ ಮಾಡುವ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:07-06-2024 ರಂದು ಅಂತರ್ ಇಲಾಖಾ ಸಮನ್ವಯ ಸಭೆಯನ್ನು ನಡೆಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಇಲಾಖೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೃಷಿ, ಮೀನುಗಾರಿಕೆ, ಸಾರಿಗೆ ಇಲಾಖೆ ಇತ್ಯಾದಿಗಳ ಇಲಾಖೆಯ ಮುಖ್ಯಸ್ಥರೊಂದಿಗೆ ಸಭೆ ನಡೆಸಿ, ಡೆಂಗಿ ಜ್ವರ ನಿಯಂತ್ರಣದಲ್ಲಿ ಎಲ್ಲಾ ಇಲಾಖೆಗಳು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಲು ಸೂಚಿಸಲಾಗಿದೆ.
10. ದಿನಾಂಕ: 25-06-2024 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಡೆಂಗಿ ನಿಯಂತ್ರಣಕ್ಕೆ ಸಮನ್ವಯ ಸಭೆಯನ್ನು ನಡೆಸಿ ರಾಜ್ಯಾದ್ಯಂತ ಪ್ರತಿ ಶುಕ್ರವಾರ "ಲಾರ್ವಾ ನಿರ್ಮೂಲನ ದಿನ"ವನ್ನು ಆಚರಿಸಲು ಮಾನ್ಯ ಮುಖ್ಯ ಮಂತ್ರಿಯವರು ಸಲಹೆ ನೀಡಿರುತ್ತಾರೆ. ಅದರಂತೆ ರಾಜ್ಯಾದ್ಯಂತ ಪ್ರತಿ ಶುಕ್ರವಾರ "ಲಾರ್ವಾ ನಿರ್ಮೂಲನ ದಿನ"ವನ್ನು ಹಮ್ಮಿಕೊಳ್ಳಲಾಗಿದೆ
11. ದಿನಾಂಕ:02-07-2024 ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ಅಂತರ್ ಇಲಾಖಾ ಸಮನ್ವಯ ಸಭೆಯನ್ನು ಏರ್ಪಡಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್, ನಗರ ಅಭಿವೃದ್ಧಿ ಇಲಾಖೆ, ಪೌರಾಡಳಿತ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗು ಇತ್ಯಾದಿ ಇಲಾಖೆಗಳೊಂದಿಗೆ ಸಭೆ ನಡೆಸಿ, ಡೆಂಗಿ ಜ್ವರ ನಿಯಂತ್ರಿಸಲು ತಮ್ಮ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಶೀಘ್ರವೇ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.
12. ದಿನಾಂಕ: 04-07-2024 ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯಾದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವರ್ಚುಯಲ್ ಸಭೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಪ್ರತಿ ಶುಕ್ರವಾರ ತಮ್ಮ ಇಲಾಖೆಯ ಕಛೇರಿಗಳಲ್ಲಿ ಲಾರ್ವಾ ನಿರ್ಮೂಲನ ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡು ಲಾರ್ವಾ ನಾಶಪಡಿಸಿ ಡೆಂಗಿ ಹರಡದಂತೆ ಕ್ರಮಕೈಗೊಳ್ಳಲು ಸೂಚಿಸಿದರು.



Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 26/07/2024 11:02 AM

13. ದಿನಾಂಕ: 08-07-2024 ಮತ್ತು 09-07-2024 ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳು ಮತ್ತು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಸಭೆಯನ್ನು ನಡೆಸಿ ಡೆಂಗಿ ನಿಯಂತ್ರಣಕ್ಕೆ ಎಲ್ಲಾ ಇಲಾಖೆಗಳ ಸಮನ್ವಯತೆಯೊಂದಿಗೆ ಸಮರೋಪಾದಿಯಲ್ಲಿ ಡೆಂಗಿಜ್ವರ ಹರಡದಂತೆ ಎಲ್ಲಾ ನಿಯಂತ್ರಣ ಕ್ರಮಗಳನ್ನು ಹಾಗೂ ಎಲ್ಲರಿಗೂ ಸೂಕ್ತ ಚಿಕಿತ್ಸೆ ದೊರೆಯುವಂತೆ ಮತ್ತು ಮರಣ ಪ್ರಕರಣಗಳು ಸಂಭವಿಸದಂತೆ ಸೂಕ್ತ ಕ್ರಮಕೈಗೊಂಡು ಕ್ಷಿಪ್ರ ಕಾರ್ಯಾಚರಣೆ ಪಡೆಯನ್ನು ತಮ್ಮ ಜಿಲ್ಲೆಯಲ್ಲಿ ರಚಿಸಿ, ಡೆಂಗಿ ಕಂಡು ಬಂದ ಗ್ರಾಮಗಳಿಗೆ ಶೀಘ್ರವೇ ಭೇಟಿನೀಡಿ ನಿಯಂತ್ರಣ ಕ್ರಮಕೈಗೊಳ್ಳಲು ಸೂಚಿಸಿದರು.

14. ಹೆಚ್ಚು ಜ್ವರ ಪುರಕರಣಗಳು ವರದಿಯಾಗುತ್ತಿರುವ ಸ್ಥಳಗಳಲ್ಲಿ ಫಿವರ್ ಕ್ಲಿನಿಕ್ ಸ್ಥಾಪಿಸಿ, ಡೆಂಗಿ ರೋಗವನ್ನು ಪತ್ತೆ ಹಚ್ಚುವ ಮತ್ತು ಚಿಕಿತ್ಸೆ ನೀಡುವ ಕಾರ್ಯವನ್ನು ಮಾಡಲಾಗುತ್ತಿದ್ದು, ಶಂಕಿತ ಡೆಂಗಿ ಪ್ರಕರಣಗಳ ರಕ್ತದ ಮಾದರಿಗಳನ್ನು ಸೆಂಟಿನಲ್ ಪ್ರಯೋಗಾಲಯಗಳಲ್ಲಿ ಉಚಿತವಾಗಿ ಪರೀಕ್ಷಿಸಲಾಗುತ್ತಿದೆ. ಇದಕ್ಕಾಗಿ ಅಗತ್ಯವಿರುವ ELISA ಆಧಾರಿತ ಎನ್ಎಸ್1 ಹಾಗೂ ಐ ಜಿ ಎಂ ಕಿಟ್ಟುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಎಲ್ಲಾ ಸರ್ಕಾರಿ ಪ್ರಯೋಗಾಲಯಗಳಿಗೆ ಸರಬರಾಜು ಮಾಡಲಾಗಿದೆ.

15. ಬಿಬಿಎಂಪಿ ವ್ಯಾಪ್ತಿಯಲ್ಲಿನ ನಗರ ಆರೋಗ್ಯ ಕೇಂದ್ರಗಳಲ್ಲಿ ಸಂಗ್ರಹಮಾಡಿದ ಶಂಕಿತ ಡೆಂಗಿ ರಕ್ತ ಮಾದರಿಗಳನ್ನು ಹೆಚ್.ಸಿದ್ದಯ್ಯ ರಸ್ತೆಯಲ್ಲಿರುವ ಆಸ್ಪತ್ರೆಯಲ್ಲಿನ ಎಸ್ಎಸ್ಎಲ್ ಪ್ರಯೋಗ ಶಾಲೆಯಲ್ಲಿ ಪರೀಕ್ಷೆ ಮಾಡಲಾಗುತ್ತಿದೆ.

16. ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಡೆಂಗಿಜ್ವರ ಪ್ರಕರಣಗಳ ನಿರ್ವಹಣೆ ಮತ್ತು ರೋಗ ಲಕ್ಷಣಗಳಿಗೆ ಅನುಗುಣವಾದ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದ್ದು, ಅಗತ್ಯವಿದ್ದಲ್ಲಿ ಡೆಂಗಿ ಜ್ವರ ಪ್ರಕರಣಗಳ ನಿರ್ವಹಣೆಗಾಗಿ ತಾಲ್ಲೂಕು ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಕನಿಷ್ಠ ತಲಾ 5 ಹಾಗೂ 8-10 ಬೆಡ್ ಗಳನ್ನು ಇಲ್ಲವೇ ಹೆಚ್ಚುವರಿ ವಾರ್ಡಗಳ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಹಾಗು ಜಿಲ್ಲಾ ಆಸ್ಪತ್ರೆಗಳಲ್ಲಿ ಡೆಂಗಿ ಜ್ವರದ ನಿರ್ವಹಣೆಗೆ ಬೇಕಾಗುವ ಜೀವರಕ್ಷಕ ಔಷಧಿಗಳು ಮತ್ತು ರೋಗ ಲಕ್ಷಣಗಳಿಗೆ ಅನುಗುಣವಾಗಿ ಬೇಕಾದ ಔಷಧಗಳನ್ನು ಸಾಕಷ್ಟು ಪ್ರಮಾಣದಲ್ಲಿ ಇರಿಸಲಾಗಿದೆ.

17. ಡೆಂಗಿ ರಕ್ತ ಸ್ರಾವಜ್ವರ (ಡೆಂಗಿ ಹೆಮರೇಜಿಕ್ ಫೀವರ್) ನಿರ್ವಹಣೆಗಾಗಿ, ಜಿಲ್ಲಾ ಮಟ್ಟದಲ್ಲಿ Blood component ಗಳ ಲಭ್ಯತೆಯ ಬಗ್ಗೆ ಇಲಾಖೆಯ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲಾಗಿದೆ ಹಾಗೂ ಈ ಮಾಹಿತಿಯನ್ನು ಪ್ರತಿ ದಿನವು ಪರಿಷ್ಕರಿಸಿ ಪ್ರಕಟಿಸಲಾಗುತ್ತಿದೆ. (ಇ ರಕ್ತಕೋಶ್, e- Raktkosh)

18. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಡೆಂಗಿ ರಕ್ತ ಪರೀಕ್ಷೆ ಮಾಡಲಾಗುತ್ತಿದೆ. ಖಾಸಗಿ ಆಸ್ಪತ್ರೆ ಹಾಗೂ ಖಾಸಗಿ ಪ್ರಯೋಗಶಾಲೆಗಳಿಗೆ ಡೆಂಗಿ ಖಚಿತ ಪಡಿಸಿಕೊಳ್ಳಲು ಮಾಡುವ ಎಲಿಸಾ ಆಧಾರಿತ NS1 & IgM ಪರೀಕ್ಷೆಗೆ ತಲಾ ರೂ 300/- ಮೀರದಂತೆ ಹಾಗೂ Screening test ಗಳಿಗೆ ( NS1, IgM & IgG) ರೂ 250/- ಗಳ ಶುಲ್ಕವನ್ನು ಸರ್ಕಾರ ನಿಗದಿಪಡಿಸಿದ್ದು, ಈ ಬಗ್ಗೆ ಸುತ್ತೋಲೆ ಹೊರಡಿಸಲಾಗಿದೆ.



Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 26/07/2024 11:02 AM

19. ರಾಜ್ಯ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ, "ವಿಬಿಡಿ ಮರಣ ತಪಾಸಣಾ ಸಮಿತಿ" (VBD Death Audit committee) ಯನ್ನು ರಚಿಸಲಾಗಿದ್ದು, ಈ ಸಮಿತಿಯು ಶಂಕಿತ ಡೆಂಗಿ ರೋಗದಿಂದ ಸಂಭವಿಸಿರಬಹುದಾದ ಎಲ್ಲಾ ಮರಣ ಪ್ರಕರಣಗಳ ವರದಿಗಳನ್ನು ಪರಿಶೀಲಿಸಿ ನಂತರ ಡೆಂಗಿ ಮರಣವನ್ನು ದೃಢೀಕರಿಸಲಾಗುತ್ತಿದೆ.
20. ಡೆಂಗಿ ರೋಗದ ಶೀಘ್ರ ಪತ್ತೆಗಾಗಿ ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರು ಮನೆಮನೆಗೆ ಭೇಟಿ ನೀಡಿ ಜ್ವರ ಸಮೀಕ್ಷಾ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಇದೇ ಸಮಯದಲ್ಲಿ ಡೆಂಗಿ ಜ್ವರದ ಲಕ್ಷಣಗಳು ಹಾಗೂ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣ ಮತ್ತು ಅವುಗಳ ನಿರ್ಮೂಲನೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿ ಅರಿವು ಮೂಡಿಸುತ್ತಿದ್ದಾರೆ. ಈ ಚಟುವಟಿಕೆಗೆ ಅಗತ್ಯವಿರುವ ಟೆಮಿಫಾಸ್ ದ್ರಾವಣ ಹಾಗೂ ತುರ್ತು ಸಂದರ್ಭಗಳಲ್ಲಿ ಒಳಾಂಗಣ ಧೂಮೀಕರಣಕ್ಕೆ ಬಳಸುವ ಪೈರಿಥ್ರಮ್ ಎಕ್ಸ್‌ಟ್ರಾಕ್ಟ್ ರಾಸಾಯನಿಕಗಳ ದಾಸ್ತಾನು ಲಭ್ಯವಿದ್ದು ಸಮರ್ಪಕವಾಗಿ ಬಳಸಲಾಗುತ್ತಿದೆ.
21. ಪ್ರತಿ ಆಶಾ ಕಾರ್ಯಕರ್ತೆಯರಿಗೆ ಲಾರ್ವಾ ಸಮೀಕ್ಷೆ ನಡೆಸಲು ಗೌರವಧನ ರೂ 200/-ಗಳನ್ನುಮತ್ತು ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳಿಗೆ ಪ್ರತಿ ತಿಂಗಳು ರೂ 300/-ಗಳನ್ನು ನೀಡಲಾಗುತ್ತಿದೆ.
22. ರಾಜ್ಯದ ದೈನಂದಿನ ಡೆಂಗಿ ಜ್ವರ ಪರಿಸ್ಥಿತಿಯ ಸೂಕ್ಷ್ಮ ಮೇಲ್ವಿಚಾರಣೆ ಹಾಗೂ ಉಸ್ತುವಾರಿಗಾಗಿ, ಎನ್ ವಿ ಬಿ ಡಿ ಸಿ ಪಿ ವಿಭಾಗದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯಸೌಧ, ಬೆಂಗಳೂರು, ಇಲ್ಲಿ "ಡೆಂಗಿ ವಾರ್ ರೂಮ್" ಅನ್ನು ಸಕ್ರಿಯಗೊಳಿಸಲಾಗಿದ್ದು, ಎಲ್ಲಾ ಜಿಲ್ಲೆಗಳು/ಬಿಬಿಎಂಪಿ ವ್ಯಾಪ್ತಿಯ ಡೆಂಗಿ ಜ್ವರ ಪರಿಸ್ಥಿತಿಯ ದತ್ತಾಂಶ/ಮಾಹಿತಿ ಸಂಗ್ರಹಿಸಲಾಗುತ್ತಿದೆ.
23. ಡೆಂಗಿ ಪರಿಸ್ಥಿತಿಯ ದೈನಂದಿನ ನಿಗಾವಣೆಗಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಅನ್ನು ರಚಿಸಿದ್ದು. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು – ಜಿಲ್ಲಾ ಪಂಚಾಯತಿ, ಪ್ರಾಜೆಕ್ಟ್ ಡೈರೆಕ್ಟರ್ – ನಗರಾಭಿವೃದ್ಧಿ, ವಿಭಾಗ ಮುಖ್ಯಸ್ಥರು – P & SM, ಮೆಡಿಕಲ್ ಕಾಲೇಜು, ಜಿಲ್ಲಾ ಆರೋಗ್ಯಾಧಿಕಾರಿಗಳು, ಜಿಲ್ಲಾಧ್ಯಕ್ಷರು – IMA & IAP, ಉಪನಿರ್ದೇಶಕರು - ಸಾರ್ವಜನಿಕ ಶಿಕ್ಷಣ, ಇವರುಗಳು ಸದರಿ ಟಾಸ್ಕ್ ಫೋರ್ಸ್ನ ಸದಸ್ಯರಾಗಿರುತ್ತಾರೆ ಹಾಗೂ ಜಿಲ್ಲಾ ವಿಬಿಡಿ ನಿಯಂತ್ರಣಾಧಿಕಾರಿಗಳು, ಜಿಲ್ಲಾ ಟಾಸ್ಕ್ ಫೋರ್ಸ್ನ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ವಾರಕ್ಕೊಮ್ಮೆ ಟಾಸ್ಕ್ ಫೋರ್ಸ್ ಸಭೆ ಸೇರಿ, ಡೆಂಗಿ ಜ್ವರ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ, ಸ್ಥಳೀಯ ಡೆಂಗಿ ಪರಿಸ್ಥಿತಿಯ ಅನ್ವಯ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ.
24. ಬಿಬಿಎಂಪಿ/ಜಿಲ್ಲೆಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಡೆಂಗಿ ಪ್ರಕರಣಗಳು ಕಂಡುಬಂದ ಸ್ಥಳಗಳನ್ನು ಹಾಟ್‌ಸ್ಪಾಟ್‌ಗಳೆಂದು ಗುರುತಿಸಿ ಅವುಗಳ ನಿಖರವಾದ ಮಾಹಿತಿಯನ್ನು ರಾಜ್ಯ ಮಟ್ಟದ ವಾರ್ ರೂಂಗೆ ಸಲ್ಲಿಸುವುದು ಮತ್ತು ಅಲ್ಲಿ ಜ್ವರ ಪ್ರಕರಣಗಳ ಸಂಖ್ಯೆಯು ಇಳಿಮುಖವಾಗುವುದನ್ನು ಖಚಿತಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
25. ಡೆಂಗಿ ಜ್ವರ ಪ್ರಕರಣಗಳ ಪರೀಕ್ಷೆ, ಚಿಕಿತ್ಸೆ ಹಾಗೂ ನಿರ್ವಹಣೆಯ ಸೌಲಭ್ಯಗಳನ್ನು (ICU ಸೇರಿದಂತೆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಂಪೂರ್ಣ ಉಚಿತವಾಗಿ ಒದಗಿಸಲಾಗುತ್ತಿದೆ. (BPL & APL ವರ್ಗದವರಿಗೆ)



Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 26/07/2024 11:02 AM

26. ಬಿಬಿಎಂಪಿ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಡೆಂಗಿ ಪ್ರಕರಣಗಳ ಮಾಹಿತಿಯನ್ನು IHIP Portal ಮೂಲಕ ಪಡೆಯಲಾಗುತ್ತಿದ್ದು, ವಿವರವನ್ನು ಸಂಬಂಧಪಟ್ಟ ವಾರ್ಡ್ ವೈದ್ಯರೊಂದಿಗೆ ಚರ್ಚಿಸಿ ತುರ್ತಾಗಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

27. ತೀವ್ರ ಡೆಂಗಿಜ್ವರದ ಲಕ್ಷಣಗಳನ್ನು ಹೊಂದಿದ್ದು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳ ICU ಮತ್ತು HDU ಗಳಲ್ಲಿ ದಾಖಲಾಗಿರುವ ರೋಗಿಗಳ ಚಿಕಿತ್ಸೆ ಹಾಗೂ ನಿರ್ವಹಣೆಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಪಡೆಯಲು Tele ICU ವ್ಯವಸ್ಥೆಯನ್ನು ಮಾಡಲಾಗಿದೆ.

## ಡೆಂಗಿ ಮತ್ತು ಚಿಕುಂಗುನ್ಯಾ ನಿಯಂತ್ರಣದ ನಿಟ್ಟಿನಲ್ಲಿ ಆರೋಗ್ಯ ಶಿಕ್ಷಣ ಚಟುವಟಿಕೆಗಳು:

ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ಸಂವಹನ ಚಟುವಟಿಕೆಗಳ ಮೂಲಕ ಸಮುದಾಯದಲ್ಲಿ ಉತ್ತಮ ಜಾಗೃತಿ ಮೂಡಿಸಲು ಸ್ಥಳೀಯ ಭಾಷೆಗಳಿಗನು ಗುಣವಾಗಿ ಐಇಸಿ ಚಟುವಟಿಕೆಗಳನ್ನು IPC, Mid Media, Social Media, News Media, Mass Media, Digital Media ಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ.

1) ಡೆಂಗಿ ಜ್ವರ ನಿಯಂತ್ರಣಕ್ಕಾಗಿ ಪ್ರತೀ ವರ್ಷ ಮೇ 16 ರಂದು ರಾಷ್ಟ್ರೀಯ ಡೆಂಗಿ ದಿನಾಚರಣೆಯನ್ನಾಗಿ ಮತ್ತು ಜುಲೈ ಮಾಹೆಯನ್ನು ಡೆಂಗಿ ವಿರೋಧಿ ಮಾಸವನ್ನಾಗಿ ಆಚರಿಸಲಾಗುತ್ತಿದೆ.
2) ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ನಡೆದ ಸಂದರ್ಶನದಲ್ಲಿ ಹಾಗೂ ಫೋನ್‌ಇನ್ ನೇರ ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡು. ಅಗತ್ಯ ಮಾಹಿತಿಯನ್ನು ಹಾಗೂ ಡೆಂಗಿ ನಿಯಂತ್ರಣದಲ್ಲಿ ಸಮುದಾಯದ ಪಾತ್ರದ ಕುರಿತು ಮಾಹಿತಿಯನ್ನು ನೀಡಿರುತ್ತಾರೆ.
3) ಶಾಲಾ ಶಿಕ್ಷಕರುಗಳಿಗೆ,ಶಾಲಾ ಮಕ್ಕಳಿಗೆ, ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ, ಗ್ರಾಮ/ವಾರ್ಡ್ ಮಟ್ಟದಲ್ಲಿ ಗ್ರಾಮದ ಮುಖಂಡರು. ಚುನಾಯಿತ ಪ್ರತಿನಿಧಿಗಳು. ಅಂಗನವಾಡಿ ಕಾರ್ಯಕರ್ತೆಯರು. ಸ್ತ್ರೀ ಶಕ್ತಿ ಸಂಘದ ಪದಾಧಿಕಾರಿಗಳು. ಸ್ವಯಂ ಸೇವಕರು. ಹಾಲು ಉತ್ಪಾದಕರ ಸಂಘದ ಸದಸ್ಯರುಗಳು. ಧಾರ್ಮಿಕ ಮುಖಂಡರನ್ನು ಒಳಗೊಂಡಂತೆ ಡೆಂಗಿ ನಿಯಂತ್ರಣ ಮತ್ತು ಮುಂಜಾಗ್ರತೆ ಬಗ್ಗೆ ಅಡ್ವೊಕೆಸಿ ಕಾರ್ಯಗಾರಗಳನ್ನು ನಡೆಸಲಾಗಿದೆ.
4) ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಮತ್ತು ಮಾನ್ಯ ಆರೋಗ್ಯ ಸಚಿವರಿಂದ ಡೆಂಗಿ ಜ್ವರ ಮತ್ತು ನಿಯಂತ್ರಣ ಕುರಿತು ಸಾರ್ವಜನಿಕರಿಗೆ ವಿಡಿಯೋ ಸಂದೇಶವನ್ನು ಎಲ್ಲಾ ಸಾಮಾಜಿಕ ಜಾಲತಾಣದಲ್ಲಿ ಪ್ರಚುರಗೊಳಿಸಲಾಗಿದೆ..
5) ಪ್ರತಿದಿನ ಘನತ್ಯಾಜ್ಯಾ ಸಂಗ್ರಹಣಕ್ಕೆ ಬರುವ ವಾಹನಗಳ ಮೂಲಕ ಮೈಕಿಂಗ್ ಮಾಡಿಸಿ ಡೆಂಗಿ ನಿಯಂತ್ರಣ ಕುರಿತು ಪ್ರಚುರ ಪಡಿಸಲಾಗುತ್ತಿದೆ.

ಒಟ್ಟಾರೆಯಾಗಿ. ಡೆಂಗಿ ಜ್ವರ, ನಿರ್ವಹಣೆ, ಅಗತ್ಯ ಮುಂಜಾಗ್ರತಾ ಹಾಗೂ ನಿಯಂತ್ರಣ ಕ್ರಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ ಎಂಬ ಅಂಶವನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಸಹ ನಿರ್ದೇಶಕರು - ಎನ್‌ವಿಬಿಡಿಸಿಪಿ



Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 26/07/2024 11:02 AM

## ಅನುಬಂಧ -2

ಡೆಂಗಿ ಪ್ರಕರಣಗಳ ಜಿಲ್ಲಾವಾರು ವಿವರವು
ದಿನಾಂಕ 01.01.2024 ರಿಂದ 17.07.2024 ರ ವರೆಗೆ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಜಿಲ್ಲೆಗಳು | ಡೆಂಗಿ ಪ್ರಕರಣಗಳು |
|---|---|---|
| 1 | ಚಿಕ್ಕಮಗಳೂರು | 621 |
| 2 | ಮೈಸೂರು | 562 |
| 3 | ಹಾವೇರಿ | 508 |
| 4 | ಮಂಡ್ಯ | 469 |
| 5 | ಧಾರವಾಡ | 422 |
| 6 | ಹಾಸನ | 422 |
| 7 | ದಕ್ಷಿಣ ಕನ್ನಡ | 351 |
| 8 | ಚಿತ್ರದುರ್ಗ | 350 |
| 9 | ಶಿವಮೊಗ್ಗ | 341 |
| 10 | ಕಲಬುರಗಿ | 269 |
| 11 | ತುಮಕೂರು | 261 |
| 12 | ದಾವಣಗೆರೆ | 258 |
| 13 | ಉಡುಪಿ | 242 |
| 14 | ಬೆಳಗಾವಿ | 215 |
| 15 | ವಿಜಯಪುರ | 203 |
| 16 | ಕೊಡಗು | 153 |
| 17 | ಉತ್ತರ ಕನ್ನಡ | 139 |
| 18 | ಕೋಲಾರ | 123 |
| 19 | ಕೊಪ್ಪಳ | 117 |
| 20 | ಚಿಕ್ಕಬಳ್ಳಾಪುರ | 113 |
| 21 | ಗದಗ | 107 |
| 22 | ಬಳ್ಳಾರಿ | 102 |
| 23 | ರಾಮನಗರ | 101 |
| 24 | ಬೀದರ್ | 89 |
| 25 | ಬಾಗಲಕೋಟೆ | 80 |
| 26 | ಚಾಮರಾಜನಗರ | 75 |
| 27 | ಬೆಂಗಳೂರು (ನ) | 63 |
| 28 | ವಿಜಯನಗರ | 62 |
| 29 | ಬೆಂಗಳೂರು (ಗ್ರಾ) | 51 |
| 30 | ರಾಯಚೂರು | 43 |
| 31 | ಯಾದಗಿರಿ | 21 |
| | ಒಟ್ಟು | 6933 |
| | ಬಿಬಿಎಂಪಿ | 4040 |
| | **ರಾಜ್ಯದ ಒಟ್ಟು** | **10973** |

DEPUTY DIRECTOR-NVBDCP
Directorate of Health & FW Services
Arogya Soudha, Magadi Road
Bengaluru 560023



Generated from eOffice by PADMA V, HFW-US-HEALTH(PV), UNDER SECRETARY, HEALTH AND FAMILY WELFARE SEC on 26/07/2024 11:02 AM